ಕರ್ನಾಟಕ ಸರ್ಕಾರ

# ಶಿವಗಂಗೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಶಿವಗಂಗೆ, ಶಿವಗಂಗೆ ಅಂಚೆ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕ್ರಸಂ : ಶಿಗ್ರಾಪಂ/11/2020–21 ದಿನಾಂಕ:–08/05/2020

ರವರಿಗೆ,

ಮಾನ್ಯ ಶ್ರೀ.ಬಿ.ಎಸ್.ಯಡಿಯೂರಪ್ಪ ರವರು
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ,
ವಿಧಾನ ಸೌಧ, ಬೆಂಗಳೂರು.

ವಿಷಯ :–ಗ್ರಾಮ ಪಂಚಾಯತ್‌ಗಳಿಗೆ ಆಡಳಿತಾಧಿಕಾರಿಗಳು ಅಥವಾ ಆಡಳಿತ ಸಮಿತಿಯ ನೇಮಕದ ಬದಲಿಗೆ ಹಾಲಿ ಇರುವ ಚುನಾಯಿತ ಪ್ರತಿನಿಧಿಗಳನ್ನೆ ಚುನಾವಣೆ ನಡೆಯುವವರೆಗೆ ಮುಂದುವರೆಸುವ ಬಗ್ಗೆ ಒತ್ತಾಯಿಸಿ ಪತ್ರ.

**************************

ಇಡೀ ದೇಶಾದ್ಯಂತ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್–19ರ ಪರಿಣಾಮ ಕರ್ನಾಟಕದ ಮೇಲೂ ಆಗಿರುವುದರಿಂದ ರಾಜ್ಯದಲ್ಲಿನ ಆಡಳಿತ ವ್ಯವಸ್ಥೆಯಲ್ಲಿ ವಿವಿಧ ರೀತಿಯ ಬದಲಾವಣೆಗಳಾಗಿವೆ. ಇದರ ಪರಿಣಾಮ ಕರ್ನಾಟಕದಲ್ಲಿ ಇದೇ ಮೇ ತಿಂಗಳ ಅಂತ್ಯದೊಳಗೆ ನಡೆಯಬೇಕಿದ್ದ ಗ್ರಾಮ ಪಂಚಾಯತ್ ಚುನಾವಣೆಯ ಮೇಲೂ ಉಂಟಾಗಿದೆ ಈ ಕೋವಿಡ್–19ರ ಸಂಕಷ್ಟದ ಸಮಯದಲ್ಲಿ ಚುನಾವಣೆಯಂತಹ ಕಾರ್ಯವನ್ನು ಕೈಗೆತ್ತಿಕೊಳ್ಳುವುದು ಅಸಾಧ್ಯವೇಸರಿ ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈಗಾಗಲೇ ಹೇಳಿರುವಂತೆ ಸುಮಾರು 6 ತಿಂಗಳುಗಳ ಕಾಲ ಚುನಾವಣೆ ಮುಂದೂಡಬೇಕಾಗಿರುವುದು ಅನಿವಾರ್ಯವಾಗಿದೆ. ಆದರೆ ಆಡಳಿತಾಧಿಕಾರಿಯ ನೇಮಕ ಅಥವಾ ಬೇರ್ಯಾವುದೋ ಉಸ್ತುವಾರಿ ಸಮಿತಿ ನೇಮಕ ಮಾಡುವ ಸರ್ಕಾರದ ಆಲೋಚನೆ ಕಾನೂನಿನಲ್ಲಿ ಅವಕಾಶವಿದ್ದರೂ ಈ ವಿಕೋಪದ ಪರಿಸ್ಥಿತಿ ಇರುವಾಗ ಸೂಕ್ತವಾದುದಲ್ಲ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸರ್ಕಾರದ ರಥದ ಎರಡು ಗಾಲಿಗಳಿದ್ದಂತೆ ಸರ್ಕಾರದ ರಥ ಮುನ್ನಡೆಸುವಲ್ಲಿ ಇಬ್ಬರ ಪಾತ್ರವೂ ಬಹಳ ಪ್ರಮುಖವಾದದ್ದು ಗ್ರಾಮ ಪಂಚಾಯತ್ ಒಂದು ಸ್ಥಳೀಯ ಸ್ವಯಂ ಸರ್ಕಾರ ಹೀಗಾಗಿಯೇ ಇಡೀ ರಾಜ್ಯದಾದ್ಯಂತ ಕೋವಿಡ್–19 ರ ಪರಿಸ್ಥಿತಿ ಘೋಷಣೆಯ ಆದಾಗ ಮೊಟ್ಟಮೊದಲು ಸರ್ಕಾರ ಮಾಡಿದ ಕೆಲಸವೇನೆಂದರೆ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಇಲಾಖೆಗಳ ಸ್ವಯಂ ಸೇವಾಸಂಸ್ಥೆಗಳ ಸ್ವಯಂ ಸೇವಕರ ಸಂಯೋಜನೆಯಲ್ಲಿ ಜಾರಿ ಪಡೆ (ಕಾರ್ಯಪಡೆ) ರೂಪಿಸಿ ಇಡೀ ಪಂಚಾಯತ್‌ನ ವಿಕೋಪ ನಿರ್ವಹಣೆಯ ಜವಾಬ್ದಾರಿಯ ನೇತೃತ್ವವನ್ನು ಗ್ರಾಮ ಸರ್ಕಾರಕ್ಕೆ ನೀಡಿದ್ದು ಚುನಾಯಿತ ಪ್ರತಿನಿಧಿಗಳಾದ ನಾವು ಪಂಚಾಯತ್ ಆಡಳಿತದಲ್ಲಿ ಸಕ್ರೀಯವಾಗಿ ಭಾಗವಹಿಸಿ ಅನುಭವ ಪಡೆದು ಗ್ರಾಮ ಪಂಚಾಯ್ತಿ ಅಭಿವೃದ್ಧಿಯಲ್ಲಿ ನಮ್ಮ ಪಾತ್ರ ಜವಾಬ್ದಾರಿಗಳ ಮಹತ್ವವನ್ನು ಆಳವಾಗಿ ಅರ್ಥೈಸಿಕೊಂಡಿದ್ದರಿಂದ ವಿಕೋಪದ ಪರಿಸ್ಥಿತಿಯನ್ನು ಸಹ ನಿಭಾಯಿಸಲು ಸ್ಥಳೀಯ ಸರ್ಕಾರವಾಗಿ ನಮಗೆ ಸಾಧ್ಯವಾಯಿತು. ಈ ಸಂದರ್ಭದಲ್ಲಿ ಗ್ರಾಮೀಣ ಜನರ ಅಗತ್ಯತೆಗಳೇನು ಇಲ್ಲಿನ ಪರಿಸ್ಥಿತಿ ಹೇಗಿದೆ ಆಗಬೇಕಾದ ಪ್ರಮುಖ

ಪರಿಸ್ಥಿತಿಯಂತೆ ಇರುವ ಈ ಸಮಯದಲ್ಲಿ ನಾವು ಸ್ಥಳೀಯ ಸರ್ಕಾರದ ಅವಿಭಾಜ್ಯ ಅಂಗವಾಗಿ ವಿಕೋಪವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಜನರ ಸಂಕಷ್ಟಗಳಿಗೆ ಸ್ಪಂದಿಸುವಲ್ಲಿ ಉತ್ತರದಾಯಿಯಾಗಿ ಕಾರ್ಯನಿರ್ವಹಿಸುತ್ತೇವೆ ಚುನಾಯಿತ ವರ್ಗ ಹಾಗೂ ಅಧಿಕಾರಿ ವರ್ಗ ಒಗ್ಗೂಡಿ ಆಡಳಿತ ನಡೆಸುವುದೇ ಈ ಪರಿಸ್ಥಿಯ ಸಮರ್ಪಕ ನಿರ್ವಹಣೆಗೆ ಪ್ರಮುಖ ಕಾರಣ ಈ ವಿಕೋಪದ ಪರಿಸ್ಥಿತಿ ಇನ್ನೂ ಮುಂದುವರೆಯುತ್ತಿರುವ ಈ ಸವಾಲಿನ ಸಮಯದಲ್ಲಿ ಪಂಚಾಯತ್ ಆಡಳಿತಕ್ಕೆ ಕೇವಲ ಆಡಳಿತಾಧಿಕಾರಿಯ ಅಥವಾ ಉಸ್ತುವಾರಿ ಸಮಿತಿಯ ನೇಮಕ ಅಸಮಂಜಸವಾದುದು ತಮ್ಮ ಸರ್ಕಾರದ ಈ ಆಲೋಚನೆ ನಿರ್ಧಾರವನ್ನು ತಕ್ಷಣವೇ ಕೈಬಿಟ್ಟು ಪ್ರಸ್ತುತ ಇರುವ ಚುನಾಯಿತ ಪ್ರತಿನಿದಿಗಳನ್ನು ಒಳಗೊಂಡಿರುವ ಸ್ಥಳೀಯ ಸರ್ಕಾರವನ್ನೇ ಮಧ್ಯಂತರ ಸ್ಥಳೀಯ ಸ್ವಯಂ ಸರ್ಕಾರವಾಗಿ ಮುಂದುವರೆಸಬೇಕಾಗಿ ಈ ಮೂಲಕ ಕರ್ನಾಟಕ ರಾಜ್ಯ ಸರ್ಕಾರವನ್ನು ಒತ್ತಾಯಿಸಿ ನಮ್ಮ ಪಂಚಾಯತ್‌ನ ಸಾಮಾನ್ಯ ಸಭೆಯ ನಿರ್ಣಯವನ್ನು ಮಂಡಿಸುತ್ತಿದ್ದೇವೆ. ಇದೇ ಪಂಚಾಯತ್‌ನ ಜನರಿಂದ ಜನರಿಂದ ಚುನಾಯಿತರಾದ ನಾವು ಸ್ಥಳೀಯ ಸರ್ಕಾರದ ಭಾಗವಾಗಿ ನಮ್ಮ ಗ್ರಾಮದ ಜನರಿಗೆ ಗ್ರಾಮದ ಅಭಿವೃದ್ಧಿಗೆ ಬದ್ಧರಾಗಿದ್ದೇವೆ.

ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಶಿವಗಂಗೆ ಗ್ರಾಮ ಪಂಚಾಯತ್ ಸೋಂಪುರ ಹೋಬಳಿ ನೆಲಮಂಗಲ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಅಧ್ಯಕ್ಷರು
ಶಿವಗಂಗೆ ಗ್ರಾಮ ಪಂಚಾಯಿತಿ
ಸೋಂಪುರ ಹೋ. ನೆಲಮಂಗಲ ತಾ.

# ಶಿವಗಂಗೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಶಿವಗಂಗೆ, ಶಿವಗಂಗೆ ಅಂಚೆ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ

ದಿನಾಂಕ-08/05/2020

ಕ್ರಸಂ : ಶಿಗ್ರಾಪಂ/11/2020-21

| ಕ್ರ.ಸಂ. | ಹೆಸರು | ಪದನಾಮ | ಸಹಿ |
|---|---|---|---|
| 1 | ಶ್ರೀ ಹನುಮಂತರಾಜು | ಅಧ್ಯಕ್ಷರು | Hanumantha |
| 2 | ಶ್ರೀಮತಿ ರಂಗಮ್ಮ | ಉಪಾಧ್ಯಕ್ಷರು | ರಂಗಮ್ಮ |
| 3 | ಶ್ರೀಮತಿ ಯಶೋಧ ಎಸ್ | ಸದಸ್ಯರು | Yashoda S |
| 4 | ಶ್ರೀ ರಾಮಣ್ಣ | ಸದಸ್ಯರು | Ramanna |
| 5 | ಶ್ರೀ ಎಂ ಭೈರೇಗೌಡ | ಸದಸ್ಯರು | M. Byregowda |
| 6 | ಶ್ರೀಮತಿ ರಂಗಮ್ಮ | ಸದಸ್ಯರು | Rangamma |
| 7 | ಶ್ರೀಮತಿ ಹೆಚ್. ಟಿ ಭಾಗ್ಯ | ಸದಸ್ಯರು | Bhagya HT |
| 8 | ಶ್ರೀಮತಿ ಕವಿತಾ ಜಿ ಸಿ | ಸದಸ್ಯರು | G.C Kavitha |
| 9 | ಶ್ರೀಮತಿ ಸುಜಾತ | ಸದಸ್ಯರು | ಸುಜಾತ |
| 10 | ಶ್ರೀಮತಿ ಕೌಸರ್ ಖಾನಂ | ಸದಸ್ಯರು | Kausar Khanum |
| 11 | ಶ್ರೀ ಎಮ್ ಮರಿಯಪ್ಪ | ಸದಸ್ಯರು | ಮರಿಯಪ್ಪ M. |
| 12 | ಶ್ರೀಮತಿ ಗಂಗಾಂಬಿಕೆ ವಿ | ಸದಸ್ಯರು | Gangambika V |
| 13 | ಶ್ರೀ. ಎಸ್. ಸಿ ಹೊನ್ನಗಂಗಶೆಟ್ಟಿ | ಸದಸ್ಯರು | S.C. Honnagangashetty |
| 14 | ಶ್ರೀನಿವಾಸ್ | ಸದಸ್ಯರು | [illegible] |
| 15 | ಶ್ರೀಮತಿ ಧನಲಕ್ಷ್ಮಿ | ಸದಸ್ಯರು | Dhanalakshmi |
| 16 | ಶ್ರೀಮತಿ ಲಕ್ಷ್ಮೀಕಾಂತಮ್ಮ | ಸದಸ್ಯರು | ಲಕ್ಷ್ಮೀಕಾಂತಮ್ಮ |
| 17 | ಶ್ರೀ. ಕೆ. ಬಿ ಬಸಪ್ಪ | ಸದಸ್ಯರು | B Basappa |

Hanumantha

ಅಧ್ಯಕ್ಷರು
ಶಿವಗಂಗೆ ಗ್ರಾಮ ಪಂಚಾಯಿತಿ
ಸೋಂಪುರ ಹೋಬಳಿ ನೆಲಮಂಗಲ ತಾ